ಸಾಕ್ಷಿ ಯನ್ನು ದಿಃ 22.12.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಿಪಿ - 7 ರಿಂದ 16 ರ ದಾಖಲೆಗಳನ್ನು ಯಾವ ಉದ್ದೇಶಕ್ಕೆ ಹಾಜರುಪಡಿಸಿದ್ದೀರಾ ಎಂದರೆ, ನನ್ನ ಆದಾಯದ ಮೂಲ ತೋರಿಸಲು ಹಾಕಿದ್ದೇನೆ.
2. ನನ್ನ ಮನೆಯನ್ನು ನಾನು ಅಡಮಾನ ಮಾಡಿ ಯಾವುದೇ ಸಾಲ ಪಡೆದಿಲ್ಲ.
3. ನಿಪಿ-7 ರ ಇ-ಸ್ವತ್ತಿನಲ್ಲಿ ಅನಧೀಕೃತ ಎಂದು ನಮೂದು ಇದೆ ಎಂದರೆ ಸರಿ. ಸದರಿ ನಿವೇಶನಕ್ಕೆ ಸಂಬಂಧಪಟ್ಟಂತೆ ಯಾವುದೇ ಆರ್ಥಿಕ ಮೌಲ್ಯ ಇಲ್ಲ ಎಂದರೆ ಸರಿಯಲ್ಲ. ಅದರ ಮೇಲೆ ಮನೆ ಕಟ್ಟಲು 2012 ರಲ್ಲಿ ಸಾಲ ಮಾಡಿದ್ದೇನೆ. ಇತ್ತೀಚಿಗೆ ಅದರ ಮೇಲೆ ಯಾವುದೆ ಸಾಲ ಮಾಡಿಲ್ಲ.
4. ನಿಪಿ - 7ರ ದಾಖಲೆ ದಿಃ 13.05.2025 ರಲ್ಲಿ ಪಡೆದಿದ್ದು ಎಂದರೆ ಸರಿ. ಈಗಲೂ ಸಹ ಅದರಲ್ಲಿ ಅನಧೀಕೃತ ಎಂದು ನಮೂದು ಇದೆ ಎಂದರೆ ಸರಿ.
5. ನಿಪಿ - 8 ರಲ್ಲಿ ರೂ.15,467-00 ಮಾತ್ರ ಎಂದು ನಮೂದು ಇದೆ ಎಂದರೆ, ಡಿ.ಎ ಮತ್ತು ಮೂಲ ವೇತನ ಸೇರಿ ಹೆಚ್ಚಾಗುತ್ತದೆ.
6. ನಿಪಿ - 9ರಲ್ಲಿ ಪಿಂಚಣಿ ರೂ.23,200-00 ಎಂದು ನಮೂದು ಇದೆ ಎಂದರೆ, ಅದು ಮೂಲ ವೇತನ ಎಂದು ನುಡಿಯುತ್ತಾರೆ.
7. ನಿಪಿ - 11ರ ಖಾತಾ ಸ್ಟೇಟ್ಮೆಂಟ್ ನಲ್ಲಿ ದಿಃ 19.09.2022 ರಂದು ಲೋನ್ ಕ್ಲೋಸ್ಡ್ ಎಂದು ಇದೆ ಎಂದರೆ ಸರಿ. ಸದರಿ ಸಾಲ ಮನೆ ಕಟ್ಟಲು ಮಾಡಿದ್ದು, ನನಗೆ ಎರಡು ಅಂತಸ್ತಿನ ಒಂದು ಮನೆ ಇದೆ.
8. ನಿಪಿ-11ರಲ್ಲಿ ದಿಃ 04.01.2024 ರಿಂದ ದಿಃ 09.01.2024ರ ವರೆಗೆ ನಿಮ್ಮ ಬ್ಯಾಂಕ್ ಖಾತೆಯಲ್ಲಿ ರೂ.7400-00 ಮಾತ್ರ ಹಣ ಇದೆ ಎಂದರೆ ಸರಿ.
9. ದಿಃ 12.01.2021 ರಿಂದ ಇಲ್ಲಿಯವರೆಗೆ ನೀವು 20 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಹಲವಾರು ಬಾರಿ ಡ್ರಾ ಮಾಡಿದ್ದೇನೆ ಎಂದರೆ ಸರಿ. ಆ ರೀತಿ ಲಕ್ಷಾಂತರ ಡ್ರಾ ಮಾಡಿರುತ್ತೇನೆ. ಸದರಿ ಹಣವನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದೀರಾ ಎಂದರೆ, ಇಟ್ಟುಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ.

10. ನಿಪಿ-11ರಲ್ಲಿ ಕೊನೆಯ ದಿನಾಂಕದಲ್ಲಿ 22.11.2025 ರಂದು ರೂ.385-00 ಹಣ ಮಾತ್ರ ಇದೆ ಎಂದರೆ ಸರಿ.
11. ನಿಪಿ-11ರಲ್ಲಿ ಒಟ್ಟು ಜಮಾ ಮೊತ್ತಕ್ಕಿಂತ ಒಟ್ಟು ಡ್ರಾ ಮಾಡಿದ ಮೊತ್ತ ಜಾಸ್ತಿ ಇದೆ ಎಂದರೆ ಸರಿ.
12. ನಿಪಿ-12ರಲ್ಲಿ ದಿಃ 12.01.2021 ರಂದು 8 ಲಕ್ಷ ಡ್ರಾ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ, ಸರಿಯಲ್ಲ. ಅದರಲ್ಲಿ ಸಹ ಕ್ರೆಡಿಟ್ ಗಿಂತ ಡೆಬಿಟ್ ಮೊತ್ತ ಜಾಸ್ತಿ ಇದೆ ಎಂದರೆ ಸರಿ.
13. ನಿಪಿ - 15 ರ ಪಹಣಿಯಲ್ಲಿ ಜಂಟಿ ಖಾತೆಯಲ್ಲಿ 35-40 ಜನರ ಹೆಸರು ಇದೆ ಎಂದರೆ ಸರಿ. ಅದರಲ್ಲಿ ನಿಖರವಾಗಿ ಜವರಪ್ಪನವರಿಗೆ ಎಷ್ಟು ಆಸ್ತಿ ಎಂದು ನಮೂದು ಇಲ್ಲ ಎಂದರೆ ಸರಿ. ಸದರಿ ಪಹಣಿಯಲ್ಲಿರುವ ಜಮೀನಿಗೆ ಸಂಬಂಧಪಟ್ಟಂತೆ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಅದರ ಮೂಲ ಮಾಲೀಕರು ಯಾರು ಎಂದು ಇನ್ನೂ ನ್ಯಾಯಾಲಯದಿಂದ ಘೋಷಣೆ ಆಗಿಲ್ಲ ಎಂದರೆ ಸರಿ.
14. ಸದರಿ ಜಮೀನಿನಲ್ಲಿ ಆದಾಯ ಬಂದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.
15. ನೀವು ಹಾಜರುಪಡಿರುವ ನಿಪಿ - 7 ರಿಂದ 16ರ ದಾಖಲೆಗಳನ್ನು ನಿಮ್ಮ ಪಾಟೀ ಸವಾಲಿನಲ್ಲಿ ಕೇಳಿದ ಕಾರಣ, ತೇಪೆ ಹಚ್ಚಲು ಸುಳ್ಳು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸರಿಯಲ್ಲ.
16. ಸದರಿ ದಾಖಲೆಗಳ ಆಧಾರದ ಮೇಲೆ ನಿಮ್ಮ ಆರ್ಥಿಕ ಮೂಲವನ್ನು ನಿಗದಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ